ಉದಯವಾಣಿ
ಕನ್ನಡ ದಿನಪತ್ರಿಕೆ

**Sunday, October 17th , 2011**

# ಬೆಂಗಳೂರಿನ ಜೈನ್ ವಿವಿಗೆ ಪ್ರಶಸ್ತಿ

ಬೆಳಗಾವಿ: ಬೆಂಗಳೂರಿನ ಜೈನ್ ವಿವಿ ತಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿ ಪ್ರಶಸ್ತಿ ಗೆದ್ದುಕೊಂಡಿದೆ.

ಶನಿವಾರ ನಡೆದ ಫೈನಲ್‌ನಲ್ಲಿ ಜೈನ್ ವಿಶ್ವವಿದ್ಯಾಲಯ ತಂಡ ಮದ್ರಾಸ್ ವಿಶ್ವವಿದ್ಯಾಲಯವನ್ನು 2–0 ನೇರ ಸೆಟ್‌ಗಳಿಂದ ಸೋಲಿಸಿತು.

ಸಿಂಗಲ್ಸ್‌ನಲ್ಲಿ ಜೈನ್ ವಿವಿಯ ತಲಶಾ ಉದ್ವಾರ 8–3 ರಿಂದ ಆರ್. ಭವಾನಿ ಅವರನ್ನು ಸೋಲಿಸಿದರೆ ಡಬಲ್ಸ್‌ನಲ್ಲಿ ಪ್ರೇರಣಾ ಮತ್ತು ಪ್ರಾರ್ಥನಾ ಜೋಡಿ ಭವಾನಿ ಮತ್ತು ಪ್ರೀತಿ ಶ್ರೀನಿವಾಸನ್ ವಿರುದ್ಧ 8–3 ರಿಂದ ಜಯಗಳಿಸಿದರು.